<u>ಸಿ.ಸಿ. ನಂ. 34/2023</u>                                    <u>ಪಿಡಬ್ಲೂಃ 1</u>

<u>ದಿನಾಂಕಃ 28-02-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.</u>

**<u>ಮುಂದುವರಿದ ಪಾಟೀ ಸವಾಲುಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ ಫಿರ್ಯಾದುದಾರರ ಪರವಾಗಿಃ</u>**

ನಿಡಿ-1 ರಲ್ಲಿ ಖಾತೆ ನಂಬರನ ಚೆಕ್ ಸ್ಲಿಪ್ ಕಾಣೆಯಾದ ಬಗ್ಗೆ ಬರೆದಿದ್ದಾರೆ ಹೊರತು ಚೆಕ್ ನಂಬರ ನಮೂದು ಮಾಡಿಲ್ಲ ಎಂದರೆ ಸರಿ . ಸದರಿ ದಾಖಲಾತಿಯಲ್ಲಿ ಚೆಕ್ ಸ್ಲೀಪ್ ಎಂದು ಬರೆದಿದ್ದಾರೆ ಚೆಕ್ ಬುಕ್ ಎಂದು ಬರೆದಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರಿದು ಬಾಂಡ್ ನಲ್ಲಿ ಚೆಕ್ ಪುಸ್ತಕದ ಒಳಗಡೆ ಚೆಕ್ ಗಳು ಕಾಣೆಯಾಗಿದೆ ಎಂದು ನುಡಿದಿರುತ್ತಾರೆ . ಬಾಂಡ್ ನ್ನು ಪೋಲಿಸ್ ಠಾಣೆಗೆ ಒಂದು ಹಾಗೂ ಬ್ಯಾಂಕಿಗೆ ಒಂದು ಬಾಂಡ್ ಕೊಟ್ಟಿದ್ದೇನೆ.. ನಾನು ಮಾಹಿತಿ ಹಕ್ಕು ಅಡಿ ಅರ್ಜಿಯನ್ನು ಹಾಕಿದಾಗ ಬಾಂಡ್ ಪ್ರತಿ ಕೊಡಿ ಎಂದು ವಕೀಲರ ಮೂಲಕ ಕೇಳಿದ್ದೇನು . ನಾನು ಮಾಹಿತಿ ಹಕ್ಕು ಅಡಿ ನಾನು ಕೊಟ್ಟಿರುವ ಫಿರ್ಯಾದು ಅದಕ್ಕೆ ಕೊಟ್ಟಿರುವ ರಸೀದಿ ಹಾಗೂ ಹಿಂಬರ ಮೂರು ದಾಖಲಾತಿಗಳನ್ನು ಮಾತ್ರ ಕೇಳಿ ಅರ್ಜಿಯನ್ನು ಕೊಟ್ಟಿದ್ದೇನೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ . ನಾನು ದೂರನ್ನು ಕೊಡುವಾಗ ಏನೆಂದು ದೂರನ್ನು ಕೊಟ್ಟಿದ್ದೀರಿ ಎಂದರೆ ಸಾಕ್ಷಿ ದೂರು ಕೊಟ್ಟು ತುಂಬಾ ದಿನ ಆಯಿತು ನಮ್ಮ ವಕೀಲರ ಮೂಲಕ ದೂರು ಕೊಟ್ಟಿದ್ದೇನೆ ಎಂದು ನುಡಿದಿರುತ್ತಾರೆ . ಈ ಖಾತೆಗೆ ಸಂಬಂಧಪಟ್ಟಂತೆ ಎಸ್ ಬಿ ಐ ಬ್ಯಾಂಕಿದಿಂದ ಒಟ್ಟು ಎರಡು ಚೆಕ್ ಬುಕ್ ಗಳನ್ನು ಪಡೆದುಕೊಂಡಿದ್ದೆನು . ಈ ಚೆಕ್ ಬುಕ್ ಕಾಣೆಯಾದ ನಂತರ ಮತ್ತೆ ಚೆಕ್ ಬುಕ್ ನ್ನು ಪಡೆದಿದ್ದೆನು. . ಸ್ಟೇಟ್ ಬ್ಯಾಂಕ್ ಖಾತೆಗೆ ಸಂಬಂಧಪಟ್ಟ ಚೆಕ್ ಬುಕ್ ನ್ನು ಪಡೆದಿದ್ದೆನು . ನಿಡಿ-1 ರಸೀದಿಯನ್ನು ನೋಡಿದರೆ ಇಂತಹ ಖಾತೆಗೆ ಸಂಬಂಧಪಟ್ಟ ಚೆಕ್ ಸ್ಲೀಪ್ ಕಾಣೆಯಾದ ಬಗ್ಗೆ ಇದೆ ಎಂದರೆ ಸರಿ . ಸಾಕ್ಷಿ ವಕೀಲರ ಬಳಿ ಬರೆಯಿಸಿಕೊಂಡು ಹೋಗಿರುತ್ತೇನೆ ಎಂದು ನುಡಿದಿರುತ್ತಾರೆ . ದೂರಿನಲ್ಲಿ ನಾಗೇಶ ರವರು ನನ್ನ ಬ್ಯಾಗಿಗೆ ಕೈ ಹಾಕಿ ಚೆಕ್ ಪುಸ್ತಕ ತೆಗೆದುಕೊಂಡಿರುವುದನ್ನು ನಾರಾಯಣ ರವರು ನೋಡಿದರು ಎಂಬುದನ್ನು ದೂರಿನಲ್ಲಿ ಬರೆಸಿದ್ದೆನೆ .

ಡಿಡಬ್ಲೂಃ 1

ನಾನು ಹಾಜರು ಪಡಿಸಿದ ನಿಡಿ -1 ರಸೀದಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ನಿಡಿ-1 ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿ ಅಲ್ಲದೆ ಇದ್ದರು ಕೂಡ ಅದನ್ನು ಹಾಜರು ಪಡಿಸಿ ಪ್ರಕರಣದ ದಿಕ್ಕು ತಪ್ಪಿಸುವ ಪ್ರಯತ್ನ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ . ದೂರಿನಲ್ಲಿ ನಾಗೇಶ ರವರು ನನ್ನ ಬ್ಯಾಗಿಗೆ ಕೈ ಹಾಹಿ ಚೆಕ್ ಪುಸ್ತಕ ತೆಗೆದುಕೊಂಡಿರುವುದನ್ನು ನಾರಾಯಣ ರವರು ನೋಡಿದರು ಎಂಬುದನ್ನು ದೂರಿನಲ್ಲಿ ಬರೆಸಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ . ನಾನು ನೋಟಿಸಿಗೆ ಕೊಟ್ಟಿರುವ ಉತ್ತರದಲ್ಲಿ ಈ ಯಾವುದೆ ವಿಚಾರವನ್ನು ಸ್ಪಷ್ಟವಾಗಿ ತಿಳಿಸಿಲ್ಲ ಎಂದರೆ ಸರಿ . ದಿನಾಂಕಃ 02-07-2024 ರಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹಾಗೂ ನ್ನ ಪಾಟೀ ಸವಾಲಿನಲ್ಲಿ ಹೇಳಿರುವ ಅಂಶಗಳು ನನ್ನ ಉತ್ತರದಲ್ಲಿ ಇಲ್ಲ ಎಂದರೆ ಸರಿ . ಈ ಪ್ರಕರಣದ ದಿಕ್ಕನ್ನು ತಪ್ಪಿಸಲು ನಂತರದಲ್ಲಿ ಹೊಸ ವಿಚಾರಗಳನ್ನು ನ್ಯಾಯಾಲಯಲ್ಲಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ . ನೋಟಿಸಿಗೆ ದಿಃ 18-12-2018 ರಂದು ನಮ್ಮ ವಕೀಲರ ಮೂಲಕ ನೊಟಿಸಿಗೆ ಉತ್ತರ ಸಿದ್ದಪಡಿಸಲಾಗಿದೆ ಎಂದರೆ ಸರಿ . ಮಾಹಿತಿ ಹಕ್ಕು ಅಡಿಯಲ್ಲಿ ನಾನು ನೀಡಿದ ದೂರಿನ ಪ್ರತಿಯನ್ನು ಕೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಸ್ಟೇಷನ್ ನಲ್ಲಿ ಇರಬಹುದು ಅಂದುಕೊಂಡಿದ್ದೆ ಎಂದು ನುಡಿದಿರುತ್ತಾರೆ . ಅವಾಗಿನಿಂದ ಇಲ್ಲಿಯವರಗೆ ನಮ್ಮ ವಕೀಲರು ಒಬ್ಬರೆ ಎಂದರೆ ಸರಿ . ಚೆಕ್ ನ್ನು 3 ಲಕ್ಷ ರೂಗಳಿಗೆ ನಾನೆ ಬರೆದು ಕೊಟ್ಟಿದ್ದೆ ಎಂದರೆ ಸರಿಯಲ್ಲ . ನಾನು ಪಡೆದ ಕೈಗಡ ಸಾಲದ ಮರು ಪಾವತಿಗಾಗಿ ಚೆಕ್ ನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ . ನಿಡಿ-1 ರಲ್ಲಿ ಚೆಕ್ ಸಂಖ್ಯೆಯನ್ನು ನಮೂದು ಇಲ್ಲ ಎಂರೆ ಸಾಕ್ಷಿ ನಾನು ಕಂಪ್ಲೆಂಟ್ ಕೊಡುವಾಗ ಚೆಕ್ ನಂಬರ ಕೊಟ್ಟಿದೆ ಆದರೆ ಪೋಲಿಸರು ಯಾಕೆ ನಮೂದಿಸಿಲ್ಲ ಗೊತ್ತಿಲ್ಲ ಎಂದು ನುಡಿದಿರುತ್ತಾರೆ . ನಾನು ಪ್ರಕರಣಕ್ಕೆ ಸಂಬಂಧಪಟ್ಟ ಚೆಕ್ ಕಳೆದಿದೆ ಎಂದು ಪೋಲಿಸ್ ಠಾಣೆಗೆ ದೂರನ್ನು ಕೊಟ್ಟಿದೆ ಎಂದು ಸುಳ್ಳು ಹೇಳುತ್ತಿದ್ದೆ ನೆ ಎಂದರೆ ಸರಿಯಲ್ಲ . ನಾನು ಈಗಲೂ ಕೂಡ ಫಿರ್ಯಾದುದಾರರಿಗೆ ಚೆಕ್ ನಲ್ಲಿ ನಮೂದಿಸಿದ ಹಣವನ್ನು ಕೊಡಲು ಬಾಧ್ಯಸ್ಥಳು ಎಂದರೆ ಸರಿಯಲ್ಲ . ನಾನು ಕೊಟ್ಟಿರುವ ಬೋಗಸ್ ಚೆಕ್‌ಗೆ ಶಿಕ್ಷೆಗೂ ಕೂಡ ಅರ್ಹಳು ಎಂದರೆ ಸರಿಯಲ್ಲ .

ಡಿಡಬ್ಲೂಃ 1

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.